ಪ್ರಮಾಣಪತ್ರಕ್ಕೆ ಲಗತ್ತು

ದಿನಾಂಕ**: 18.03.2025** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ನೀಡಲಾಯಿತು.

ಮುಂದುವರಿದ ಪಾಟೀ ಸವಾಲು ವಾದಿ ಪರ ಶ್ರೀ ಎಸ್ ಎನ್ ಸಿ ವಕೀಲರಿಂದಃ-

ದಾವಾ ಸ್ವತ್ತುಗಳು ಮೂಲ ತೋಟಿ ಇನಾಂತಿ ಜಮೀನುಗಳಾಗಿರುತ್ತವೆ. ದಾವಾ ಸ್ವತ್ತುಗಳು ಪ್ರತಿವಾದಿ ಗಂಡನಾದ ನಾರಾಯಣಪ್ಪನಿಗೆ **1948** ರಲ್ಲಿ ತೋಟಿ ಇನಾಂತಿಯಲಿ ಮಂಜೂರಾಗಿರುತ್ತದೆಂದರೆ ಸರಿ. ದಿಃ**07.05.1974** ಮತ್ತು **10.06.1974** ರಲ್ಲಿ ದಾವಾ ಸ್ವತ್ತುಗಳನ್ನು ನಾರಾಯಣಪ್ಪನವರು ವಾದಿಗೆ ಮಾರಾಟ ಮಾಡಿರುತ್ತಾರೆಂದರೆ ಸರಿ. ಸಾಕ್ಷಿ ಮುಂದುವರೆದು **25** ಗುಂಟೆ ಜಮೀನನ್ನು ಮಾತ್ರ ಮಾರಟ ಮಾಡಿರುತ್ತಾರೆಂದು ಹೇಳುತ್ತಾರೆ **1988** ರಲ್ಲಿ ವಾದಿಯವರನ್ನು ದಾವಾ ಸ್ವತ್ತುಗಳಿಂದ ಹೊರದೂಡಬೇಕೆಂದು ತಹಸೀಲ್ದಾರ್ ರವರು ಆದೇಶ ಮಾಡಿರುತ್ತಾರೆಂದರೆ ನನಗೆ ಗೊತ್ತಿಲ್ಲ. ಸದರಿ ಆದೇಶವನ್ನು ವಾದಿ ಎಂ ಎ ನಂ.**118/1988** ರಂತೆ ಕೋಲಾರದ ಜಿಲ್ಲಾ ನ್ಯಾಯಾಲಯದಲ್ಲಿ ವಜಾ ಮಾಡಿಸಿರುತ್ತಾರೆಂದರೆ ನನಗೆ ಗೊತ್ತಿಲ್ಲ. **2010** ರಲ್ಲಿ ಅಸಲು ದಾವಾ ಸಂಃ**191/2010** ರಂತೆ ಗಂಗಮ್ಮ ರವರು ವಾದಿಯ ಮೇಲೆ ಒಂದು ದಾವೆಯನ್ನು ನಿ.ಡಿ.**1** ರಂತೆ ಹೂಡಿರುತ್ತಾರೆಂದರೆ ನನಗೆ ಗೊತ್ತಿಲ್ಲ. ಸದರಿ ದಾವೆ ಗಂಗಮ್ಮ ರವರು ನ್ಯಾಯಾಲಯಕ್ಕೆ ಹಾಜರಾಗುತ್ತಿಲ್ಲ ಎಂದು ಹೇಳಿ ವಜಾ ಗೊಂಡಿರುತ್ತದೆಂದರೆ ನನಗೆ ಗೊತ್ತಿಲ್ಲ.

**2.** ಎಂ ಆರ್ ನಂ.**05/2009** ರ ಮೇಲೆ ಗಂಗಮ್ಮನವರು ಒಂದು ಅಪೀಲನ್ನು ಎಸಿ ನ್ಯಾಯಾಲಯದಲ್ಲಿ ಸಲ್ಲಿಸಿರುತ್ತಾರೆಂದರೆ ಸರಿ. ಎಸಿ ನ್ಯಾಯಾಲಯದಲ್ಲಿ ಸದರಿ ಪ್ರಕರಣವನ್ನು ತಹಸೀಲ್ದಾರ್ ರವರಿಗೆ ಕಳುಹಿಸಿ ಪರಿಶೀಲಿಸಬೇಕೆಂದು ಆದೇಶ ಮಾಡಲಾಗಿರುತ್ತದೆಂದರೆ ನನಗೆ ಗೊತ್ತಿಲ್ಲ. ತಹಸೀಲ್ದಾರ್ ರವರು ಸ್ಥಳ ಪರಿಶೀಲನೆ ಮಾಡಿ ವಾದಿಯ ಹೆಸರಿಗೆ ಖಾತಾ ಮಾಡಬೇಕೆಂದು ನಿ.ಪಿ.**4** ರಂತೆ ಆದೇಶ ಮಾಡಿರುತ್ತಾರೆಂದರೆ ಸರಿಯಲ್ಲ. ಸದರಿ ಆದೇಶ ಆದ ನಂತರ ಗಂಗಮ್ಮ ಹಾಗೂ ಆಕೆ ಕುಟುಂಬದವರು ವಾದಿಯ ಸ್ವಾಧೀನಕ್ಕೆ ತೊಂದರೆ ಉಂಟು ಮಾಡಿದ್ದರಿಂದ ದಾವೆಯನ್ನು ಹೂಡಿರುತ್ತಾರೆಂದರೆ ಸರಿಯಲ್ಲ. ಸದರಿ ತೊಂದರೆಗೆ ಸಂಬದಪಟ್ಟಂತೆ ಪೋಲೀಸರಿಗೆ ವಾದಿ ದೂರನ್ನು ನೀಡಲು ಹೋದಾಗ ವ್ಯಾಜ್ಯವು ಸಿವಿಲ್ ಸ್ವರೂಪದ್ದಾದ್ದರಿಂದ ಸಿವಿಲ್

ನ್ಯಾಯಾಲಯದಲ್ಲಿ ಬಗೆ ಹರಿಸಿಕೊಳ್ಳಿ ಎಂದು ಹೇಳಿರುತ್ತಾರೆಂದರೆ ಸರಿಯಲ್ಲ. ಈ ದಾವೆಯನ್ನು ಹೂಡಿದ ನಂತರ ಸಹ ನಾವು ವಾದಿಯ ಸ್ವಾಧೀನಕ್ಕೆ ತೊಂದರೆ ಉಂಟು ಮಾಡಿದ್ದರಿಂದ ವಾದಿ ಪೋಲೀಸರಿಗೆ ನಿ.ಪಿ.**3** ರಂತೆ ದೂರನ್ನು ನೀಡಿರುತ್ತಾರೆಂದರೆ ಸರಿಯಲ್ಲ. ನಿ.ಪಿ.**5** ರಿಂದ **12** ರಂತೆ ಮರವನ್ನು ವಾದಿ ಕಟಾವು ಮಾಡಿಸುತ್ತಿರುವಾಗ ನಾನು ವಾದಿಯ ಸ್ವಾಧೀನಕ್ಕೆ ತೊಂದರೆ ಉಂಟು ಮಾಡಿರುತ್ತೇನೆಂದರೆ ಸರಿಯಲ್ಲ.

**(ಪಾಟೀ ಸವಾಲಿಗೆ ವಾದಿ ಪರ ವಕೀಲರು ಕಾಲಾವಕಾಶ ಕೋರಿದ್ದು, ಪಾಟೀ ಸವಾಲಿಗೆ ಕಾಲಾವಕಾಶ ನೀಡಲಾಯಿತು.)**

**(ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)**

ಓ. ಹೇ. ಕೇ. ಸರಿ ಇದೆ.
ಸಹಿ/-

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾದಂ., ಶಿಡ್ಲಘಟ್ಟ.